**ನಿರ್ವಹಣೆ:** ಮುಂಜಾನೆ ಹೊತ್ತಿನಲ್ಲಿ ಮೂತಿ ಹುಳುಗಳನ್ನು ಆರಿಸಿ ಸಾಯಿಸಬೇಕು. ಪ್ರತಿ ಲೀ. ನೀರಿಗೆ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಬೆರೆಸಿ ಸಿಂಪಡಿಸಬೇಕು. ಬಿತ್ತನೆಯಾದ 5 ವಾರಗಳ ನಂತರ ಬೆಳೆಗೆ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಅಥವಾ 4 ಗ್ರಾಂ ಕಾರ್ಬಾರಿಲ್ 50 ಡಬ್ಲ್ಯೂ.ಪಿ. ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

**5. ಕಾಯಿ ಕೊರೆಯುವ ಹುಳು:** ಎರಡು ಬಗೆಯ ಕಾಯಿ ಕೊರಕಗಳು ಬೆಳೆಯನ್ನು ಬಾಧಿಸುತ್ತವೆ. ಮೊದಲು ಮರಿಹುಳುಗಳು ಎಳೆದಾದ ರೆಂಬೆಗಳನ್ನು ಕೊರೆದು ತಿನ್ನುವುದರಿಂದ ರೆಂಬೆಗಳು ಒಣಗುತ್ತವೆ. ನಂತರ ಹೂ ಮೊಗ್ಗುಗಳು ಮತ್ತು ಹೂಗಳನ್ನು ತಿನ್ನುವುದರಿಂದ ಕೆಳಗೆ ಬಿದ್ದು ಹಾಳಾಗುತ್ತವೆ. ಕ್ರಮೇಣ ಕಾಯಿಗಳನ್ನು ಕೊರೆದು ಒಳಭಾಗ ಮತ್ತು ಎಳೆದಾದ ಬೀಜಗಳನ್ನು ತಿನ್ನುತ್ತವೆ.

**ನಿರ್ವಹಣೆ:** ಮುಂಜಾನೆ ಹೊತ್ತಿನಲ್ಲಿ ಮೂತಿ ಹುಳುಗಳನ್ನು ಆರಿಸಿ ಸಾಯಿಸಬೇಕು. ಪ್ರತಿ ಲೀ. ನೀರಿಗೆ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಬೆರೆಸಿ ಸಿಂಪಡಿಸಬೇಕು. ಬಿತ್ತನೆಯಾದ 5 ವಾರಗಳ ನಂತರ ಬೆಳೆಗೆ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಅಥವಾ 4 ಗ್ರಾಂ ಕಾರ್ಬಾರಿಲ್ 50 ಡಬ್ಲ್ಯೂ.ಪಿ. ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

**ರೋಗಗಳು**

1. **ಹಳದಿ ನಂಜು ರೋಗ:** ರೋಗಕ್ಕೆ ತುತ್ತಾದ ಗಿಡದಲ್ಲಿ ಎಲೆಗಳು ಹಳದಿ ಬಣ್ಣದಿಂದ ಕೂಡಿದ್ದು ಕ್ರಮೇಣ ಪೂರ್ತಿ ಗಿಡ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಗಿಡದ ಬೆಳವಣಿಗೆ ಕುಂಠಿತಗೊಂಡು ಇಳುವರಿ ಕಡಿಮೆಯಾಗುತ್ತದೆ.

**ನಿರ್ವಹಣೆ:** ರೋಗಬಾಧಿತ ಗಿಡಗಳನ್ನು ಕಿತ್ತು ನಾಶಪಡಿಸಬೇಕು ಹಳದಿ ನಂಜುರೋಗ ಹರಡುವ ಕೀಟಗಳ ನಿಯಂತ್ರಣಕ್ಕೆ 1.7 ಮಿ.ಲೀ. ಡೈಮಿಥೋಯೆಟ್ ಅಥವಾ 0.25 ಮಿಲಿ ಇಮಿಡಾಕ್ಲೋಪ್ರಿಡ್ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು. ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾದ್ಯವಾಗದಿದ್ದಲ್ಲಿ 15 ದಿವಸಗಳ ನಂತರ ಇದೇ ಸಿಂಪರಣೆಯನ್ನು ಪುನರಾವರ್ತಿಸಬೇಕು.

2. **ಬೂದಿರೋಗ:** ಎಲೆಗಳ ಮೇಲೆ ಬಿಳಿ ಶಿಲೀಂಧ್ರ ಬೆಳವಣಿಗೆ ಕಂಡು ಬರುತ್ತದೆ. ರೋಗದ ತೀವ್ರತೆ ಹೆಚ್ಚಾದಾಗ ಎಲೆಗಳು ಒಣಗುತ್ತವೆ.

   **ನಿರ್ವಹಣೆ:** ಬೂದು ರೋಗ ಕಂಡು ಬಂದಲ್ಲಿ 1 ಮಿ.ಲೀ. ಡೈಫೆನ್‌ಕೊನಾಜೋಲ್‌ನ್ನು ಪ್ರತಿ ಲೀಟರ್ ನೀರಿಗೆ ಸೇರಿಸಿ 15 ದಿನಗಳಿಗೊಮ್ಮೆ 3 ಸಲ ಸಿಂಪಡಿಸಬೇಕು.

3. **ಎಲೆ ಚುಕ್ಕೆ ರೋಗ:** ವೃತ್ತಾಕಾರದ ಮತ್ತು ಉಂಗುರಾಕಾರದ ಚುಕ್ಕೆಗಳು ಕಾಣಿಸುತ್ತವೆ. ಆಮೇಲೆ ಒಂದಕ್ಕೊಂದು ಸೇರಿಕೊಂಡು ಎಲೆಗಳು ಒಣಗುತ್ತವೆ.

**ನಿರ್ವಹಣೆ:** ಸೆರ್ಕೋಸ್ಪೋರಾ ಎಲೆ ಚುಕ್ಕೆ ರೋಗ ಕಂಡು ಬಂದಲ್ಲಿ 1 ಗ್ರಾಂ ಕಾರ್ಬಂಡೈಜಿಮ್ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು. 15 ದವಸಗಳ ನಂತರ ಇದೇ ಸಿಂಪರಣೆಯನ್ನು ಪನರಾವರ್ತಿಸಿ. ಪ್ರತಿ ಹೆಕ್ಟೇರಿಗೆ 450-530 ಲೀಟರ್ ಸಿಂಪರಣಾ ದ್ರಾವಣ ಬೇಕಾಗುತ್ತದೆ.

4. **ಗಂಟು ಬೇರು/ ಜಂತು ರೋಗ:** ರೋಗಕ್ಕೆ ತುತ್ತಾದ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಅಂತಹ ಗಿಡಗಳನ್ನು ಕಿತ್ತು ನೋಡಿದಾಗ ಬೇರುಗಳಲ್ಲಿ ಗಂಟುಗಳು ಕಾಣುತ್ತವೆ.

**ನಿರ್ವಹಣೆ:** ಮಣ್ಣಿಗೆ ಬೇವಿನ ಹಿಂಡಿ ಸೇರಿಸಬೇಕು. ಬೆಳೆ ಪರಿವರ್ತನೆ ಮಾಡಬೇಕು.

**ಕೊಯ್ಲು ಮತ್ತು ಇಳುವರಿ:** ಬಿತ್ತಿದ 40 ದಿವಸಗಳ ನಂತರ ಮೊದಲ ಬಾರಿ ಕೊಯ್ಲು ಮಾಡಬಹುದು. ಮುಂದೆ 6 ರಿಂದ 8 ವಾರಗಳವರೆಗೆ ಇಳುವರಿ ನಿರೀಕ್ಷಿಸಬಹುದು. ಪ್ರತಿ ಹೆಕ್ಟೇರಿಗೆ 15 ರಿಂದ 20 ಟನ್ ಇಳುವರಿ ಪಡೆಯಬಹುದು.

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ**

**ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ. ಕಂಕನಾಡಿ, ಮಂಗಳೂರು – 575 002**

# ಬೆಂಡೆ ಬೆಳೆಯ ಬೇಸಾಯ ಕ್ರಮಗಳು





**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ,**
**ಮಂಗಳೂರು, ದಕ್ಷಿಣ ಕನ್ನಡ – 575002**
www.kvkdk.org, kvkdk@rediffmail.com
**0824–2431872**

ಬೆಂಡೆಯು ಕರಾವಳಿ ಭಾಗದ ಪ್ರಮುಖ ತರಕಾರಿ ಬೆಳೆ. ಇದು ಜೀವಸತ್ವ 'ಸಿ', ಅಯೋಡಿನ್ ಮತ್ತು ಸುಣ್ಣದ ಅಂಶವನ್ನು ಪೂರೈಸುತ್ತದೆ. ಈ ಬೆಳೆಯನ್ನು ಯಾವುದೇ ಸಮಸ್ಯೆಯಿಲ್ಲದೆ ವೈಜ್ಞಾನಿಕವಾಗಿ ಬೆಳೆಸಿ ಉತ್ತಮ ಲಾಭ ಪಡೆಯಬಹುದಾಗಿದೆ.

ಬೆಂಡೆಯನ್ನು ಎಲ್ಲಾ ವಿಧವಾದ ಮಣ್ಣಿನಲ್ಲಿ ಬೆಳೆಯಬಹುದು. ಆದರೆ ನೀರು ಬಸಿದು ಹೋಗುವಂತಹ ಮರಳು ಮಿಶ್ರಿತ ಗೋಡು ಮಣ್ಣು ಉತ್ತಮವಾದುದು. ದಕ್ಷಿಣ ಒಣ ಪ್ರದೇಶಗಳಲ್ಲಿ ಜೂನ್–ಜುಲೈ ಮತ್ತು ಜನವರಿ–ಫೆಬ್ರವರಿ ಸೂಕ್ತ ಕಾಲವಾಗಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಜನವರಿ–ಫೆಬ್ರವರಿ ಸೂಕ್ತ ಕಾಲ, ಕರಾವಳಿ ಪ್ರದೇಶಗಳಲ್ಲಿ ಜೂನ್–ಜುಲೈ ಸೂಕ್ತ.



ಬೆಂಡೆ ಬೆಳೆಯಲ್ಲಿ ವಿವಿಧ ತಳಿಗಳಿವೆ ಅದರೆ ಕರಾವಳಿ ಭಾಗದಲ್ಲಿ ಅತ್ಯಂತ ಜನಪ್ರಿಯವಾದ ಸ್ಥಳೀಯ ತಳಿಯೆಂದರೆ ವೈಟ್ ವೆಲ್ವೆಟ್ (ಹಾಲು ಬೆಂಡೆ) ತಳಿ. ಈ ತಳಿಯು ಕರಾವಳಿ ಜಿಲ್ಲೆಗಳಲ್ಲಿ ಬಹು ಬೇಡಿಕೆಯನ್ನು ಹೊಂದಿದೆ.

**ಬೇಸಾಯ ಸಾಮಗ್ರಿಗಳು ಪ್ರತಿ ಹೆಕ್ಟೇರಿಗೆ**

| ಬಿತ್ತನೆಯ ಬೀಜ (ಕಿ. ಗ್ರಾಂ) | ಕೊಟ್ಟಿಗೆ/ ಕಾಂಪೋಸ್ಟ್ ಗೊಬ್ಬರ (ಟನ್) | ರಾಸಾಯನಿಕ ಗೊಬ್ಬರಗಳು (ಕಿ. ಗ್ರಾಂ) | | |
|---|---|---|---|---|
| | | ಸಾರಜನಕ | ರಂಜಕ | ಪೊಟ್ಯಾಷ್ |
| 1.5 | 25 | 125 | 75 | 63 |

ಬಿತ್ತನೆ ಮಾಡಲು ಭೂಮಿಯನ್ನು 2–3 ಸಾರಿ ಚೆನ್ನಾಗಿ ಉಳುಮೆಮಾಡಿ, ಕಳೆಕಸಗಳನ್ನು ಆರಿಸಿ ತೆಗೆದು ಸಮಮಾಡಬೇಕು. ಕಡೇ ಉಳುಮೆಯೊಂದಿಗೆ ಪುಡಿಮಾಡಿ ಪೂರ್ತಿ ಕೊಟ್ಟಿಗೆ ಗೊಬ್ಬರ, ಅರ್ಧಭಾಗ ಸಾರಜನಕ ಮತ್ತು ಪೂರ್ಣ ಪ್ರಮಾಣದ ರಂಜಕ ಹಾಗೂ ಪೊಟ್ಯಾಷ್ ಸತ್ವಗಳನ್ನು ಮಣ್ಣಿಗೆ ಸೇರಿಸಬೇಕು. 2 ಅಡಿ ಅಂತರದಲ್ಲಿ ದಿಂಡು ಮತ್ತು ಕಾಲುವೆಗಳನ್ನು ಮಾಡಬೇಕು. ಹಿಂದಿನ ರಾತ್ರಿ ನೀರಿನಲ್ಲಿ ನೆನೆಸಿಟ್ಟ ಬೀಜವನ್ನು ದಿಂಡುಗಳ ಮಗ್ಗುಲ ಉದ್ದಕ್ಕೆ 1 ಅಡಿಗೊಂದರಂತೆ ಬಿತ್ತಿ, ತೆಳ್ಳಗೆ ನೀರು ಕೊಡಬೇಕು. ಹೀಗೆ ಮಾಡಿದಲ್ಲಿ ಬೀಜಗಳು ಚೆನ್ನಾಗಿ ಮೊಳಕೆಯೊಡೆಯುತ್ತವೆ. ಬಿತ್ತನೆ ಮಾಡಿದ 4 ವಾರಗಳ ನಂತರ ಉಳಿದ ಅರ್ಧಭಾಗ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಟ್ಟು, ಸಾಲು ಎಳೆಯಬೇಕು.

**ನೀರಾವರಿ ಮತ್ತು ಅಂತರ ಬೇಸಾಯ** ಭೂಮಿ ಮತ್ತು ವಾತಾವರಣಕ್ಕನುಗುಣವಾಗಿ 5–7 ದಿನಗಳಿಗೊಮ್ಮೆ ಹದವರಿತು ನೀರು ಕೊಡುವುದು ಅಗತ್ಯ. ಹನಿ ನೀರಾವರಿ ಅಳವಡಿಸಿದಲ್ಲಿ ಪ್ರತಿ ದಿನ 20–40 ನಿಮಿಷ ನೀರನ್ನು ಕೊಡುವುದು.

ಲಘು ಪೋಷಕಾಂಶಗಳ ನಿರ್ವಹಣೆಗೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರುರವರು ಅಭಿವೃದ್ಧಿಪಡಿಸಿರುವ **"ತರಕಾರಿ ಸ್ಪೆಷಲ್ ಲಘು ಪೋಷಕಾಂಶವನ್ನು"** ಪ್ರತಿ ಲೀಟರಿಗೆ 2 ಗ್ರಾಂ. ನಂತೆ ಮಿಶ್ರಮಾಡಿ ನಾಟಿ ಮಾಡಿದ 45, 60 ಮತ್ತು 75 ದಿನಗಳಲ್ಲಿ ಮೂರು ಬಾರಿ ಸಿಂಪರಣೆ ಮಾಡುವುದು.

**ಕಳೆ ನಿರ್ವಹಣೆ:** ಬಿತ್ತಿದ ದಿನ ಅಥವಾ ಮರುದಿನ ಎಕರೆಗೆ 12 ಲೀ. ಬೂಟಾಕ್ಲೋರ್ 50 ಇ.ಸಿ. 400 ಲೀ. ನೀರಿನಲ್ಲಿ ಬೆರೆಸಿ ಮಣ್ಣಿನ ಮೇಲೆ ಸಿಂಪಡಿಸಿದರೆ ಬೀಜದಿಂದ ಹರಡುವ ಕಳೆಗಳನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು. ಈರುಳ್ಳಿ, ಮೆಣಸಿನಕಾಯಿ ಮುಂತಾದ ಅಂತರ ಬೆಳೆ ಪದ್ಧತಿಯಲ್ಲಿ ಬೀಜ ಬಿತ್ತಿದ ಎರಡು ದಿನಗಳೊಳಗಾಗಿ ಪ್ರತಿ ಎಕರೆಗೆ 1.3 ಲೀ. ಪೆಂಡಿಮೆಥಲಿನ್ 30 ಇ.ಸಿ 400 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಬಿತ್ತನೆ ಮಾಡಿದ 40 ದಿನಗಳ ನಂತರ ಕೈಯ್ಯಿಂದ ಕಳೆ ತೆಗೆಯುವುದರಿಂದ ಪರಿಣಾಮಕಾರಿ ನಿರ್ವಹಣೆ ಮಾಡಬಹುದು.

**ಸಸ್ಯ ಸಂರಕ್ಷಣೆ**

**ಕೀಟಗಳು**

1. **ಜಿಗಿ ಹುಳು:** ಗಿಡಗಳು ಚಿಕ್ಕದಿರುವಾಗ ಜಾಸ್ತಿ ರಸ ಹೀರುವುದರಿಂದ ಎಲೆಗಳು ಅಂಚಿನಿಂದ ಮೇಲಕ್ಕೆ ಮುದುಡಿ. ಎಲೆಗಳ ಅಂಚು ಕೆಂಪಾಗುತ್ತವೆ. ಇಂತಹ ಎಲೆಗಳು ಕ್ರಮೇಣ ಒಣಗುತ್ತವೆ.

**ನಿರ್ವಹಣೆ:** ಬಿತ್ತನೆಯಾದ 2 ವಾರಗಳ ನಂತರ ಸಸಿಗಳನ್ನು 1.3ಮಿ.ಲೀ. ಆಕ್ಸಿಡೆಮಿಟಾನ್ ಮಿಥೈಲ್ 25 ಇ.ಸಿ. ಅಥವಾ 0.5 ಮಿ.ಲೀ. ಪಾಸ್ಫಾಮಿಡಾನ್ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

2. **ಕೆಂಪು ಹತ್ತಿ ತಿಗಣೆ:** ಅಪ್ಸರೆ ಮತ್ತು ಪ್ರೌಢ ಕೀಟಗಳು ಕಾಯಿಗಳಿಂದ ರಸವನ್ನು ಹೀರುತ್ತವೆ. ತಿಗಣೆಗಳು ಕೆಂಪು ಬಣ್ಣದಿಂದ ಕೂಡಿರುತ್ತವೆ. ಬಾಧೆಗೊಳಗಾದ ಕಾಯಿಗಳು ಆಕೃತಿಯನ್ನು ಕಳೆದುಕೊಳ್ಳುತ್ತವೆ.

**ನಿರ್ವಹಣೆ:** ಬಿತ್ತನೆಯಾದ 2 ವಾರಗಳ ನಂತರ ಸಸಿಗಳನ್ನು 1.3ಮಿ.ಲೀ. ಆಕ್ಸಿಡೆಮಿಟಾನ್ ಮಿಥೈಲ್ 25 ಇ.ಸಿ. ಅಥವಾ 0.5 ಮಿ.ಲೀ. ಪಾಸ್ಫಾಮಿಡಾನ್ ಪ್ರತೀ ಲೀಟರ್ ನೀರಿಗೆಬೆರೆಸಿ ಸಿಂಪಡಿಸಬೇಕು.

3. **ಹೇನು:** ಹೇನುಗಳು ಎಲೆಗಳಿಂದ ರಸವನ್ನು ಹೀರುತ್ತವೆ. ಇಂತಹ ಎಲೆಗಳು ಮುರುಟಾಗುತ್ತವೆ. ಅಂಟು ಪದಾರ್ಥ ಸ್ರವಿಸುವುದರಿಂದ ಕಪ್ಪು ಬೂಷ್ಟ್ ಬೆಳವಣಿಗೆ ಆಗುತ್ತದೆ.

**ನಿರ್ವಹಣೆ:** ಬಿತ್ತನೆಯಾದ 2 ವಾರಗಳ ನಂತರ ಸಸಿಗಳನ್ನು 1.3ಮಿ.ಲೀ. ಆಕ್ಸಿಡೆಮಿಟಾನ್ ಮಿಥೈಲ್ 25 ಇ.ಸಿ. ಅಥವಾ 0.5 ಮಿ.ಲೀ. ಪಾಸ್ಫಾಮಿಡಾನ್ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

4. **ರೆಂಬೆ ಕೊರೆಯುವ ಹುಳು:** ಮರಿಹುಳು ಕಾಂಡವನ್ನು ಕೊರೆದು ತಿನ್ನುವುದರಿಂದ ಕಾಂಡದ ಕೆಳಭಾಗದಲ್ಲಿ ದಪ್ಪನೆ ಗಂಟು ಆಗುತ್ತದೆ. ಅಂತಹ ಗಿಡಗಳ ರೆಂಬೆಗಳು ಅಥವಾ ಕಾಂಡಗಳು ಮುರಿದು ಬೀಳುತ್ತವೆ.